**<u>ಅಸಲು ದಾವಾ ಸಂಖ್ಯೆ- 46/2017</u>**

**<u>ವಾದಿ ಸಾಕ್ಷಿ - 1</u>**

**<u>ಮಧ್ಯಕಾಲೀನ ಅರ್ಜಿ ಸಂಖ್ಯೆ 8 ರಿಂದ 10ರ ಆದೇಶದ ಮೇರೆಗೆ ದಿನಾಂಕ 22-03-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು</u>**

**<u>ಹೆಚ್ಚುವರಿ ಮುಖ್ಯ ವಿಚಾರಣೆಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎಸ್. ಎ. ಕಲ್ಲೂರರವರಿಂದ.</u>**

ದಿನಾಂಕ 20-10-2015 ರ ಕ್ರಯ ಪತ್ರದ ಧೃಡಿಕೃತ ನಕಲನ್ನ ಹಾಜರು ಮಾಡಿದ್ದೇನೆ ಅದನ್ನ ನಿಡಿ-6 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನ ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**<u>ಹೆಚ್ಚುವರಿ ಪಾಟೀ ಸವಾಲುಃ ವಾದಿಗಳ ಪರ ವಕೀಲರಾದ ಶ್ರೀ ಆರ್. ಜಿ. ಸಂಜವಾದಮಠ.</u>**

ನಿಡಿ-6ರ ಜಮೀನನ್ನ ಖಾಜಾ ಬೀ ಮಾರಾಟ ಮಾಡಿದ್ದು ಅದನ್ನ ಶ್ರೀದೇವಿ ಎನ್ನುವವರ ಹೆಸರಿನಲ್ಲಿ ಖರೀದಿಸಲಾಗಿರುತ್ತದೆ. ಶ್ರೀದೇವಿಯು ಈ ದಾವೆಯ ವಾದಿ ಅಥವಾ ಪ್ರತಿವಾದಿಯಲ್ಲ, ಸಾಕ್ಷಿ ಮುಂದೂವರೆದು ಸದರಿ ಶ್ರೀದೇವಿಯು 1 ನೇ ಪ್ರತಿವಾದಿಯಾದ ಅಪ್ಪಾಸಾಹೇಬನ 2 ನೇ ಹೆಂಡತಿ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿಯಾದ ಲಕ್ಷ್ಮೀಬಾಯಿಯು 1 ನೇ ಪ್ರತಿವಾದಿಯ ಮೊದಲನೇ ಹೆಂಡತಿ ಎಂದರೆ ಸರಿ. ಶ್ರೀದೇವಿಯು 1 ನೇ ಪ್ರತಿವಾದಿಯ 2 ನೇ ಹೆಂಡತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-6ರ ಆಸ್ತಿಯನ್ನ ಖರೀದಿಸಲು ಶ್ರೀದೇವಿಯು ತನ್ನ ಸ್ವಂತ ಹಣವನ್ನ ನೀಡಿದ್ದಾಳೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯಲ್ಲಿರುವ ಹಿಸ್ಸೆ ಹಕ್ಕನ್ನ ಎತ್ತಿ ಹಾಕುವ ಉದ್ದೇಶದಿಂದ ನಿಡಿ-6ರನ್ನ ಹಾಜರು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ತಂದೆಯಾದ ರುದ್ರಗೌಡ ಇಬ್ಬರು ಮಹಿಳೆಯರನ್ನ ಮದುವೆ ಆಗಿದ್ದ ಎಂದರೆ ಸರಿ. ಶಿವಲಿಂಗಮ್ಮ ಬದುಕಿದ್ದಾಗಲೆ ಸದರಿ ರುದ್ರಗೌಡರು ಗಂಗಮ್ಮ ಎನ್ನುವವಳನ್ನ ವಿವಾಹವಾಗಿದ್ದಾರೆ ಎಂದರೆ ಸರಿ. ಶಿವಲಿಂಗಮ್ಮಳಿಗೆ ರುದ್ರಗೌಡರು ವಿಚ್ಛೇದನ ನೀಡಿಲ್ಲ ಎಂದರೆ ಸರಿ.

**<u>ಮರು ವಿಚಾರಣೆಃ</u> ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ.ಇದೆ.**

**ಹಿರಿಯ ಶ್ರೇಣಿ ದಿವಾನಿ ನ್ಯಾಯಾಧೀಶರು**

**ಜೇವರ್ಗಿ**